ದಿನಾಂಕ:19-12-2018 ರಂದು ಮಂಡಳಿಯಿಂದ ಅನುಷ್ಠಾನಾಧಿಕಾರಿಗಳು ಇವರಿಗೆ ಲೆಕ್ಕ ಶಾಖೆಯಿಂದ ಹಣ ಪಾವತಿ ಪ್ರಕ್ರಿಯೆ ಕುರಿತು ನಡೆಸಿದ ಸಭೆಯ ನಡವಳಿ:

~0~

ದಿನಾಂಕ:19-12-2018 ರಂದು ಮಂಡಳಿಯಿಂದ ಅನುಷ್ಠಾನಾಧಿಕಾರಿಗಳು ಇವರಿಗೆ ಹಣ ಪಾವತಿಯ ಪ್ರಕ್ರಿಯೆ ಕುರಿತು ಲೆಕ್ಕ ಶಾಖೆ ಅಧಿಕಾರಿ/ಸಿಬ್ಬಂದಿ ಹಾಗೂ ಕಂಪ್ಯೂಟರ ಆಪರೇಟರ ಇವರ ಸಭೆಯನ್ನು ನಡೆಸಿದ್ದು, ಸಭೆಯಲ್ಲಿ ಕೆಳಕಂಡ ಅಂಶಗಳು ಕಂಡುಬಂದಿರುತ್ತವೆ.

1. ಮಂಡಳಿಯಿಂದ ಕಾಮಗಾರಿವಾರು ಅನುಷ್ಠಾನಾಧಿಕಾರಿಗಳು ಸಲ್ಲಿಸುವ ಬಿಲ್ಲುಗಳನ್ನು ನೇರವಾಗಿ ಹಣಕಾಸು ನಿಯಂತ್ರಕರು ಇವರ ಒಪ್ಪಿಗೆ ಮೇರೆಗೆ ಹಣವನ್ನು ಆರ್.ಟಿ.ಜಿ.ಎಸ್. ಮೂಲಕ ಪಾವತಿಸಲಾಗುತ್ತಿದೆ. ಈ ಹಂತದಲ್ಲಿ ಅನುದಾನ ಬಿಡುಗಡೆಗೆ ಮಂಡಳಿಯ ಕಾರ್ಯದರ್ಶಿಯವರ ಅಥವಾ ಅಧಿಕಾರ ಪ್ರತ್ಯಾಯೋಜಿಸಿರುವ ಅಧಿಕಾರಿಯವರಿಗೆ ಅನುಮೋದನೆ ಪಡೆಯುವ ಪದ್ಧತಿ ಜಾರಿಯಲ್ಲಿ ಇರುವುದಿಲ್ಲವೆಂದು ಕಂಡುಬಂದಿರುತ್ತದೆ.
2. ಪ್ರಸ್ತುತ ಅಧಿಕ ಮೊತ್ತದ ಕಾಮಗಾರಿಗಳಲ್ಲಿಯೂ ಸಹ ನೇರವಾಗಿ ಲೆಕ್ಕ ಶಾಖೆಯಿಂದ ಹಣ ಪಾವತಿಯಾಗುತ್ತಿದ್ದು, ಇವುಗಳಲ್ಲಿ ಗುಣಮಟ್ಟದ ಕುರಿತು ನಿಯಮಾನುಸಾರ ಪರಿಶೀಲನೆಯಾಗಿರುವುದನ್ನು ಖಚಿತ ಪಡಿಸುವ ವ್ಯವಸ್ಥೆ ಇರುವುದಿಲ್ಲ.
3. ಅನುಷ್ಠಾನಾಧಿಕಾರಿಗಳಿಂದ ಕಾಮಗಾರಿವಾರು ಬಿಲ್ಲುಗಳನ್ನು ಆರ್.ಟಿ.ಜಿ.ಎಸ್ ಮುಖಾಂತರ ಹಣ ಬಿಡುಗಡೆಗಾಗಿ ಮಂಡಳಿಯ ಸಾಫ್ಟವೇರನಲ್ಲಿ ಅಳವಡಿಸಲಾಗುತ್ತಿದೆ ಹಾಗೂ ಅದರ ಹಾರ್ಡ ಕಾಪಿಯನ್ನು ಸಹ ಸಲ್ಲಿಸುತ್ತಿರುವರು. ಆದರೇ ಮಂಡಳಿಯ ಪ್ರಕಾರ ಸಾಫ್ಟವೇರನಲ್ಲಿ ಸಲ್ಲಿಸಿರುವ ಬಿಲ್ಲ ದಾಖಲಾತಿಗಳ ಆಧಾರದ ಮೇರೆಗೆ ಕಡತಗಳನ್ನು ಮಂಡಿಸಲು ನಿರ್ದೇಶನಗಳಿದ್ದರೂ, ವಿಷಯ ನಿರ್ವಾಹಕರು/ಕಂಪ್ಯೂಟರ ಆಪರೇಟರ್ ನೈಜ ಪ್ರತಿ ಭೌತಿಕವಾಗಿ ಲಭ್ಯವಾಗುವವರೆಗೂ ಕಡತ ಮಂಡಿಸದೇ ಇರುವುದರಿಂದ ವಿಳಂಬವಾಗುತ್ತದೆ. ಅಲ್ಲದೇ ಅನುಷ್ಠಾನಾಧಿಕಾರಿಯವರು ಒಂದೇ ಬಿಲ್ಲನ್ನು ಸಲ್ಲಿಸದೇ ಬಿಲ್ಲುಗಳನ್ನು ಸಂಗ್ರಹಿಸಿ, ಭೌತಿಕವಾಗಿ ಸಲ್ಲಿಸುವುದರಿಂದ ಅನಗತ್ಯ ಸಮಯವಕಾಶ ವ್ಯಯವಾಗುವುದು ಕಂಡು ಬಂದಿರುತ್ತದೆ.
4. ಮುಂದುವರೆದು, ನೇರವಾಗಿ ಬ್ಯಾಂಕಿಂಗ್ ಹಣ ಪಾವತಿ ಸಂಪರ್ಕತೆ (ಇಂಟರಪೇಸ) ಕಲ್ಪಿಸುವ ಕುರಿತು ಕ್ರಮ ಜರುಗಿಸುವದು

ಮಂಡಳಿಯಿಂದ ಅನುಷ್ಠಾನಾಧಿಕಾರಿಗಳು ಸಲ್ಲಿಸುವ ಬಿಲ್ಲುಗಳನ್ನು ಹಣವನ್ನು ಆರ್.ಟಿ.ಜಿ.ಎಸ್. ಮೂಲಕ ಪಾವತಿಸುವ ಪೂರ್ವ ಅನುಮೋದನೆಯನ್ನು ಕಾರ್ಯದರ್ಶಿಯವರ ಅಥವಾ ಅಧಿಕಾರ ಪ್ರತ್ಯಾಯೋಜಿಸುವ ಕುರಿತು ಹಾಗೂ ಮಂಡಳಿಯ ನಿರ್ದೇಶನದ ಪ್ರಕಾರ ಸಾಫ್ಟವೇರನಲ್ಲಿ ಸಲ್ಲಿಸಿರುವ ಬಿಲ್ಲ ದಾಖಲಾತಿಗಳ ಆಧಾರದ ಮೇರೆಗೆ ಕಡತಗಳನ್ನು ಮಂಡಿಸುವ ಬಗ್ಗೆ ಸೂಕ್ತವಾದ ಸುತ್ತೋಲೆಯನ್ನು ಹೊರಡಿಸಲು ಕ್ರಮ ಜರುಗಿಸುವುದು,

19.12.18

ಕಾರ್ಯದರ್ಶಿಗಳು
ಹೈ.ಕ.ಪ್ರ.ಅ.ಮಂಡಳಿ,
ಕಲಬುರಗಿ

ಪ್ರತಿಯನ್ನು ಅನುಪಾಲನೆಗಾಗಿ

1. ಉಪ ಕಾರ್ಯದರ್ಶಿಗಳು, ಹೈ.ಕ.ಪ್ರ.ಅ.ಮಂಡಳಿ, ಕಲಬುರಗಿ
2. ಹಣಕಾಸು ನಿಯಂತ್ರಕರು, ಹೈ.ಕ.ಪ್ರ.ಅ.ಮಂಡಳಿ, ಕಲಬುರಗಿ
3. ಜಂಟಿ ನಿರ್ದೇಶಕರು , (ಯೋಜನೆ), ಹೈ.ಕ.ಪ್ರ.ಅ.ಮಂಡಳಿ, ಕಲಬುರಗಿ